ಅವನು, ತನ್ನ ಹೆಂಡತಿ ಮತ್ತು ಇಬ್ಬರು ಮಕ್ಕಳಿಗೆ ಒರ್ಲ್ಯಾಂಡೊಗೆ ಟಿಕೆಟ್ ಬುಕ್ ಮಾಡಲು ತನ್ನ ಕಾರ್ಯದರ್ಶಿಗೆ ಸೂಚಿಸಿದ. ಅದೂ ತನ್ನ ಸ್ವಂತ ಖರ್ಚಿನಲ್ಲಿ ಎಂದು ಒತ್ತಿ ಹೇಳುವುದನ್ನು ಮರೆಯಲಿಲ್ಲ.

ಫ್ಲೋರಿಡಾದಲ್ಲಿ ಇಳಿಯುತ್ತಿದ್ದಂತೆ ಅಗರ್ಬಿ ಪರಿವಾರದವರು ಮಾರಿಯಟ್ ಹೋಟೆಲಿನಲ್ಲಿ ಚೆಕ್‌ಇನ್ ಆದರು. ಅನಂತರ ಅವನು ಮಡದಿಗೆ ತನಗೆ ನ್ಯೂಯಾರ್ಕಿನಲ್ಲಿ ಸ್ವಲ್ಪ ತುರ್ತು ಕೆಲಸ ಇದೆ, ಅದನ್ನು ಮುಗಿಸಿ ಬಂದು ನಿಮ್ಮನ್ನು ಸೇರಿಕೊಳ್ಳುತ್ತೇನೆ ಎಂದು ಹೇಳಿ ಹೊರಟು ಹೋದ. ಅತ್ತ ಅವನ ಪರಿವಾರ ಡಿಸ್ನಿ ವರ್ಡ್ ನೋಡಲು ಆತುರ ತೋರುತ್ತಿದ್ದಂತೆ ಇತ್ತ ಇಗ್ನೇಶಿಯಸ್ ಅಗರ್ಬಿ ನ್ಯೂಯಾರ್ಕ್ ವಿಮಾನ ಏರಿದ. ಲಾ ಗಾರ್ಡಿಯದಿಂದ ಕೆನಡಿ ಏರ್‌ಪೋರ್ಟ್‌ಗೆ ಹೋಗಲು ಹೆಚ್ಚು ದೂರವಿಲ್ಲ. ತನ್ನ ಬಟ್ಟೆಯನ್ನು ಬದಲಾಯಿಸಿ ಅಗರ್ಬಿ ಸ್ವಿಸ್ ಏರ್‌ನಲ್ಲಿ ನಗದು ಹಣ ಪಾವತಿಸಿ ಜಿನೇವಾಕ್ಕೆ ಹೋಗಿ ಬರುವ ಟಿಕೆಟು ಖರೀದಿಸಿದ.

ಸ್ವೀಡನ್ ತಲಪುತ್ತಲೇ ಇಗ್ನೇಶಿಸ್ ಅಗರ್ಬಿ ಒಂದು ಸಾಮಾನ್ಯ ಹೋಟೆಲಿನಲ್ಲಿ ಇಳಿದುಕೊಂಡು ಎಂಟು ಗಂಟೆ ಗಡದ್ದಾಗಿ ನಿದ್ದೆ ಹೊಡೆದ. ಬೆಳಗಿನ ಉಪಹಾರ ಮುಗಿಸಿ ತನ್ನ ಬ್ರೀಫ್‌ಕೇಸಿನಿಂದ ಒಂದು ಲಿಸ್ಟನ್ನು ಹೊರತೆಗೆದ. ಆ ಲಿಸ್ಟಿನಲ್ಲಿ ಅವನೇ ಆರಿಸಿಕೊಂಡಿದ್ದ ಕೆಲವು ಸ್ವಿಸ್ ಬ್ಯಾಂಕುಗಳ ಹೆಸರುಗಳಿದ್ದವು. ಮೊಟ್ಟಮೊದಲು ತಾನು ಉಳಿದುಕೊಂಡಿದ್ದ ಹೋಟೆಲಿನ ಕಿಟಕಿಯಿಂದ ಹೊರಗೆ ಕಾಣಿಸುತ್ತಿದ್ದ **Gerber et cie** ಬ್ಯಾಂಕಿಗೆ ಹೋಗುವುದೆಂದು ನಿಶ್ಚಯಿಸಿದ. ಅದೊಂದು ಬೃಹತ್ ಕಟ್ಟಡ. ಕೆಳಗೆ ಹೋಟೆಲಿನ ರಿಸೆಪ್ಷನ್‌ನಲ್ಲಿ ಅವನು ಬ್ಯಾಂಕಿನ ಟೆಲಿಫೋನ್ ನಂಬರನ್ನು ಪಡೆದುಕೊಂಡು ಫೋನಾಯಿಸಿದ. ಬ್ಯಾಂಕಿನ ಚೇರ್ಮನ್, ಇಗ್ನೇಶಿಯಸ್ ಅಗರ್ಬಿಗೆ ಮಧ್ಯಾಹ್ನ 12 ಗಂಟೆಗೆ ಭೇಟಿಯಾಗಲು ಸಮಯ ಕೊಟ್ಟರು.

ಹನ್ನೆರಡು ಗಂಟೆಗೆ ಕೆಲವು ನಿಮಿಷಗಳ ಮೊದಲೇ ಇಗ್ನೇಶಿಯಸ್ ಅಗರ್ಬಿ ಬ್ಯಾಂಕಿನ ಮುಖ್ಯ ದ್ವಾರದ ಬಳಿಗೆ ತಲುಪಿದ. ಅವನನ್ನು ಎದುರುಗೊಳ್ಳಲು ಕಾಯುತ್ತಿದ್ದ ಒಬ್ಬ ಯುವ ಸ್ವಿಸ್ ಉದ್ಯೋಗಿ ಅಗರ್ಬಿಯನ್ನು ಕಾಣುತ್ತಲೇ ಕೊಂಚ ಗಲಬಿಲಿಗೊಂಡ ಎಂದೇ ಹೇಳಬಹುದು. ಸಮಯದ ಪರಿಪಾಲನೆ ನೈಜೀರಿಯಾದವರ ಸ್ವಭಾವಕ್ಕೆ ವಿರುದ್ಧವಾದದ್ದು ಎಂದು ಅವನು ಕಂಡುಕೊಂಡಿದ್ದ. ಬೂದು ಬಣ್ಣದ ಸೂಟು, ಅಚ್ಚ ಬಿಳಿ ಶರಟು, ಬೂದು ಬಣ್ಣದ ರೇಶಿಮೆ ಟೈ ಧರಿಸಿದ್ದ ಬ್ಯಾಂಕ್ ಉದ್ಯೋಗಿಯ ಎದುರು ಸವೆದು ಹೋದ ಬ್ರೀಫ್‌ಕೇಸನ್ನು ಹಿಡಿದು ನಿಂತಿದ್ದ ಇಗ್ನೇಶಿಯಸ್ ಅಗರ್ಬಿ ಪೇಲವನಾಗಿ ಕಾಣಿಸುತ್ತಿದ್ದ. ಬ್ಯಾಂಕಿನ ಸ್ವಾಗತಕಾರ

